683 (715) ಶ್ರೀ ಕೃಷ್ಣ ವಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಒಟ್ಟು ಮಂಜೂರಾದ ಸಿ–ದರ್ಜೆಯ ವಿವಿಧ ಹುದ್ದೆಗಳು ಎಷ್ಟು , ಅವುಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳು ಎಷ್ಟು ,

ಆ) ಮಂಜೂರಾಗಿರುವ ಕೃಷಿ ಸಹಾಯಕರ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು , ಅವುಗಳನ್ನು ಯಾವಾಗ ತುಂಬಲಾಗುವುದು ,

ಇ) ರೈತರಿಗೆ ನೇರವಾಗಿ ನೆರವಾಗುವ ಎಲ್ಲಾ ಖಾಲಿ ಹುದ್ದೆಗಳನ್ನು ತ್ವರಿತಗತಿಯಲ್ಲಿ ತುಂಬುವ ಮೂಲಕ ಕೃಷಿ ಅಭಿವೃದ್ಧಿ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಲು ಸರಕಾರ ಕ್ರಮ ಜರುಗಿಸುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಕೃಷಿ ಇಲಾಖೆ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳು 6497 ಖಾಲಿ ಇರುವ ಹುದ್ದೆಗಳು 1309

ಆ) 695 ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇರುತ್ತದೆ ಇಲಾಖೆಯ 2000ರ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಕೃಷಿ ಸಹಾಯಕರ ಹುದ್ದೆಗೆ ನೇರ ನೇಮಕಾತಿ ಸ್ಥಗಿತಗೊಳಿಸಲಾಗಿದೆ

ಇ) ಕೃಷಿ ಸಹಾಯಕರ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು

684 (716) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ತೋಟಗಾರಿಕೆಯಲ್ಲಿ ಮಿಷನ್ ವ್ಯಾಪ್ತಿಗೆ ಎಷ್ಟು ಜಿಲ್ಲೆಗಳನ್ನು ಒಳಪಡಿಸಲಾಗಿದೆ ,

ಆ) ಮಿಷನ್ ವ್ಯಾಪ್ತಿಗೆ ಒಳಪಡಿಸುವಲ್ಲಿ ಹೊಂದಿರಬೇಕಾದ ಮಾನದಂಡಗಳು ಯಾವುವು ,

ಇ) ಮಿಷನ್ ವ್ಯಾಪ್ತಿಗೆ ಯಾವ ಯಾವ ತೋಟಗಾರಿಕಾ ಬೆಳೆಗಳನ್ನು ಸೇರ್ಪಡೆ ಮಾಡಲಾಗಿದೆ ,

ಈ) 2005–06 ಹಾಗೂ 2006–07ನೇ ಸಾಲಿಗೆ ಮಂಜೂರಾದ ಹಣದ ಮೊತ್ತ ಎಷ್ಟು ,